ಶ್ರೀ ಎಂ. ರಘುಪತಿ —ಈಗ ಒಂದು ಮಾಹಿತಿ ನೀಡಿದ್ದಾರೆ. ಆ ಮಾಹಿತಿಯಂ ವಿವರಗಳು ಈಗ ನನ್ನ ಬಳಿಯಿಲ್ಲ. ಅವರು ಕೊಟ್ಟಿರತಕ್ಕಂತಹ ಮಾಹಿತಿಯನ್ನು ನಾನು ಪರಿಶೀಲನೆ ಮಾಡುತ್ತೇನೆ. ಆ ಮಾಹಿತಿಯ ಪ್ರಕಾರ ಉತ್ತರದಲ್ಲಿ ಏನಾದರೂ ವ್ಯತ್ಯಾಸವಿದ್ದರೆ. ಅದನ್ನು ಸರಿಪಡಿಸಿ ನ್ಯಾಯ ದೊರಕಿಸಿಕೊಡಲು ಏರ್ಪಾಡು ಮಾಡುತ್ತೇನೆ.

ರಾಜ್ಯದಲ್ಲಿ ಹಣ್ಣಿನ ಸಂರಕ್ಷಣಾ ಘಟಕವನ್ನು ಪ್ರಾರಂಭಿಸುವುದು.

೧೬೨೮ ಶ್ರೀ ಬಿ. ಎನ್. ಬಚ್ಚೇಗೌಡ, (ಹೊಸಕೋಟೆ).—ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಣ್ಣು ಸಂಸ್ಕರಣ ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದೆ ಇದೆಯೆ ?

ಆ. ಹಾಗಿದ್ದಲ್ಲಿ ಈ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ ?

ಇ) ಈ ಯೋಜನೆಗೆ ತಗಲುವ ಒಟ್ಟು ವೆಚ್ಚವೆಷ್ಟು ?

ಶ್ರೀ ಬಿ. ಸೋಮಶೇಖರ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಇದೆ.

ಆ) ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ ಮೈಸೂರು ಇವರಿಂದ ಟೊಮೋಟೊ ಹಾಗೂ ಇತರ ಹಣ್ಣುಗಳ ಸಂಸ್ಕರಣಾ ಕೇಂದ್ರ ಒಂದನ್ನು ಬೆಂಗಳೂರು ಜಿಲ್ಲೆಯಲ್ಲಿ ಸ್ಥಾಪಿಸಲು ಒಂದು ತಾಂತ್ರಿಕ ವರದಿಯನ್ನು ಈಗಾಗಲೇ ತರಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಅಂದಾಜು ವೆಚ್ಚ ರೂ. ೧೬೩.೧೦ ಲಕ್ಷ

ಶ್ರೀ ಬಿ. ಸೋಮಶೇಖರ್.—ಈಗ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಕೇಂದ್ರ ಸರ್ಕಾರದ ವೆಚ್ಚ ಸುಮಾರು ಶೇಕಡ ೪೯ ರಷ್ಟು, ರಾಜ್ಯ ಸರ್ಕಾರದ್ದು ಶೇಕಡ ೫೧ರಷ್ಟು. ಅಂದರೆ, ೧೬೩ ಲಕ್ಷದಲ್ಲಿ ಕರ್ನಾಟಕ ಸರ್ಕಾರದ್ದು ೪೨.೦೫ ಲಕ್ಷ ಕೇಂದ್ರ ಸರ್ಕಾರದ್ದು ೪೦ ಲಕ್ಷ ಈಕ್ವಿಟಿ ಷೇರು ೮೦.ಲಕ್ಷ ರೂಪಾಯಿ ಶೇಕಡ ಎರಡರಷ್ಟು ಬಡ್ಡಿ ದರದ ಮೇಲೆ ಸಾಲ ಕೊಡುವುದು ಸೇರಿ ಒಟ್ಟು ೧೨೧ ಲಕ್ಷ ರೂಪಾಯಿ ಬೆಂಗಳೂರು ಜಿಲ್ಲೆಯಲ್ಲಿ ಮಾಡುವ ಯೋಜನೆ ಇದೆ. ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆ ಪರಿಶೀಲನೆ ಮಾಡುತ್ತಿದೆ. ಮುಂದೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಎನ್. ಬಚ್ಚೇಗೌಡ.—ಯಾವಾಗ ಸ್ಥಾಪನೆ ಮಾಡುತ್ತೀರಾ ಎಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಪರಿಶೀಲನಾ ಹಂತದಲ್ಲಿರುವುದರಿಂದ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ —ಮಾವಿನ ಹಣ್ಣಿನ ಮತ್ತು ದ್ರಾಕ್ಷಿ ಹಣ್ಣಿನ ಸಂಸ್ಕರಣ ಯೂನಿಟ್‌ನ್ನು ಕೂಡ ಸ್ಥಾಪನೆ ಮಾಡುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಇದನ್ನು ಆಗ್ರೋ ಇಂಡಸ್ಟ್ರೀಯಲ್ ಕಾಂಪ್ಲೆಕ್ಸ್ ಎಂಬ ಕಾರ್ಪೊರೇಷನ್ ಮಾಡಬೇಕಾಗುತ್ತದೆ. ಇದರಲ್ಲಿ ಟೊಮೊಟೋ ಮಾತ್ರವಲ್ಲ, ಎಲ್ಲ ತರದ ಹಣ್ಣುಗಳನ್ನು ಸಂಸ್ಕರಣ ಮಾಡುವಂಥಾದ್ದು ಇದೆ.

ಶ್ರೀ ಕೆ.ಹೆಚ್. ಪಾಟೀಲ್.—ಹಣ್ಣು ಸಂಸ್ಕರಣ ಯೋಜನೆಯನ್ನು ಯ ಸ್ಟಾಪನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಅನುಕೂಲಗಳನ್ನು ಪಡೆದುಕೊಂಡು ಸಹಕಾರ ಸಂಘಗಳ ಮೂಲಕ ಮಾಡುವುದಕ್ಕೆ ಪ್ರಯತ್ನ ಮಾಡಿತ್ತೀರಾ ?

ಶ್ರೀ ಬಿ. ಸೋಮಶೇಖರ್.—ವಿಶ್ವಬ್ಯಾಂಕಿನಿಂದ ನೆರವು ಪಡೆದು, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಮೂಲಕ ಪ್ರತಿಯೊಂದು ಜಿಲ್ಲೆಗಳಲ್ಲೂ ಹಣ್ಣು ಸಂಸ್ಕರಣ ಘಟಕಗಳನ್ನು ಸ್ಥಾಪನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆ.

ಸಂಚಾರಿ ಪಶುವೈದ್ಯ ಘಟಕವನ್ನು ಸ್ಥಾಪಿಸುವ ಬಗ್ಗೆ

೧೧೮೧. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಪಶುಸಂಗೋಪನೆ ಮಂತ್ರಿ ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ತಾಲ್ಲೂಕಿನಲ್ಲಿ ಸಂಚಾರಿ ಪಶುವೈದ್ಯ ಘಟಕವನ್ನು ಒದಗಿಸದಿರಲು ಕಾರಣಗಳೇನು?

ಆ) ಸದರಿ ಸಂಚಾರಿ ಘಟಕವನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನೆ ಮಂತ್ರಿ ಪಶುವೈದ್ಯ ಸೇವಾ ರಾಜ್ಯ ಸಚಿವರು).—

ಅ) ಹೊಸನಗರ ತಾಲ್ಲೂಕಿನಲ್ಲಿ ಸಂಚಾರಿ ಪಶುವೈದ್ಯಶಾಲೆಯನ್ನು ತೆರೆಯುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ, ಆದರೆ ಹಣವ ತೊಂದರೆಯಿಂದಾಗಿ ಒದಗಿಸಲು ಸಾಧ್ಯವಾಗಿಲ್ಲ.

ಆ) ಮುಂಬರುವ ವರ್ಷಗಳಲ್ಲಿ ಪರಿಗಣಿಸಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಕೂಡ ಇದೇ ತರಹ ಉತ್ತರವನ್ನು ಕೊಟ್ಟಿದ್ದರು. ಮುಂದಿನ ವರ್ಷವೂ ಕೂಡ ಇದೇ ರೀತಿಯ ಉತ್ತರ ಬರಬಹುದೆಂದು ನಿರೀಕ್ಷೆ ಮಾಡುತ್ತೇನೆ. ಯಾವ ತಾರೀಖಿನಲ್ಲಿ ಮಾಡಲಿತ್ತೀರಾ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಸಿದ್ಧರಾಮಯ್ಯ.—ಸ್ವಾಮಿ, ಕಳೆದ ವರ್ಷ ಈ ರೀತಿಯ ಉತ್ತರ ಕೊಟ್ಟಿರಲಿಲ್ಲ. ಯಾವ ತಾರೀಖು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮೂಲಕ ಸಂಚಾರಿ ಪಶುವೈದ್ಯ ಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದಾವುದರಿಂದ ಹೊಸನಗರ ತಾಲ್ಲೂಕಿಗೆ ಆದ್ಯತೆ ಮೇರೆಗೆ ಕೊಡಲಿಕ್ಕೆ ಪ್ರಯತ್ನ ಮಾಡಲಾಗುವುದು.

ರಾಜ್ಯದಲ್ಲಿ ಗಂತ್ರಿಗೆ ಆಧಾರದ ಮೇರೆಗೆ ನೇಮಿಸಿಕೊಂಡಿರುವ ಉಪಾಧ್ಯಾಯರುಗಳ ಸೇವೆಗಳನ್ನು ಖಾಯಂ ಗೊಳಿಸುವುದು

೧೫೨೩. ಶ್ರೀ ಬಿ.ಎ ಉಟ್ಟಿನ (ಕುಂದಗೋಳ),—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಅವರನ್ನು ಖಾಯಂಗೊಳಿಸಲು ಸರ್ಕಾರದವರಂ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರುಗಳು ೩೭೨೬
ಪ್ರೌಢಶಾಲಾ ಶಿಕ್ಷಕರುಗಳು ೩೩೮೦

ಆ) ಇವರುಗಳ ಸೇವೆಯನ್ನು ಖಾಯಂ ಗೊಳಿಸಲು ನಿಯಮಗಳ ರೀತ್ಯಾ ಅವಕಾಶವಿರುವುದಿಲ್ಲ.

ಶ್ರೀ ಬಿ. ಎ. ಉಟ್ಟಿನ.—ಮಾನ್ಯ ಅಧ್ಯಕ್ಷರೇ, ಹೊಸದಾಗಿ ಶಿಕ್ಷಕರನ್ನು ನೇಮಿಸಿಕೊಳ್ಳುತಕ್ಕಂಥ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರಾಶಸ್ತ್ಯ ಕೊಡಲಾಗುವುದೆ? ಯಾವ ರೀತಿಯ ಪ್ರಾಶಸ್ತ್ಯ ಕೊಡಲಾಗುವುದು?